ದಿನಾಂಕಃ-30.10.2023. ಒ.ಎಸ್. 46/2021
ಪಿ.ಡಬ್ಲ್ಯೂ-01

<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಮುಂದುವರಿದ ಪಾಟೀ ಸವಾಲುಃ-</u> ಶ್ರೀ ವಿ.ಜಿ.ಎಮ್ ವಕೀಲರಿಂದ ಪ್ರತಿವಾದಿಯರ ಪರವಾಗಿ

34. ಬಾಸ್ಕರ ಬಿನ್ ಗೋಪಾಲ ಎನ್ನುವವರು ನನ್ನ ಗಂಡ ಎಂದರೆ ನಿಜ. ಪುರುಷೋತ್ತಮ ಬಿನ್ ವೇಲಾಯುದನ್ ರವರು ನನ್ನ ಗಂಡನ ಚಿಕ್ಕಮ್ಮನ ಮಗ ಎಂದರೆ ನಿಜ.

35. ನಿಮ್ಮ ಗಂಡ ನಾಯರ್ ಶೆಟ್ಟಿ ಜಾತಿಗೆ ಸೇರಿದವರೇ ಎಂದರೆ ಹೌದು.

36. ಯಾವ ಗ್ರಾಮದಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲು ಬೇಕು ಎಂದು ಕೇಳುತ್ತಿದ್ದೀರಿ ಎಂದರೆ ಪುದುವೆಟ್ಟು ಗ್ರಾಮ.

37. ಆಸ್ತಿಗಳಲ್ಲಿ ಭಾಗ ಬೇಕು ಎಂದು ಯಾವಾಗ ಪ್ರತಿವಾದಿಯರನ್ನು ಕೇಳಿದಿರಿ ಎಂದರೆ 2018 ರಲ್ಲಿ, ಆದರೆ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ.



ತದನಂತರದಲ್ಲಿ ಪಾಲು ಬೇಕು ಎಂದು ಕೇಳಿದ್ದೀರಾ ಎಂದರೆ ಕೇಳಿದ್ದೇನೆ.

38. ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳು ಪ್ರಸ್ತುತ ಯಾರ ಹೆಸರಿನಲ್ಲಿವೆ ಎಂದರೆ ಪ್ರತಿವಾದಿಯರ ಹೆಸರಿನಲ್ಲಿ. ದಾವಾ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಯರ ಹೆಸರು ದಾಖಲಾಗಿರುವುದನ್ನು ಸಂಬಂದಪಟ್ಟ ಪ್ರಾಧಿಕಾರದ ಮುಂದೆ ಪ್ರಶ್ನಿಸಿದ್ದೀರಾ ಎಂದರೆ ಇಲ್ಲ.

39. ಪ್ರತಿವಾದಿಯರು ಅವರ ತಂದೆಯಿಂದ ಬಂದ ಆಸ್ತಿಗಳಿಗೆ ಸಂಬಂಧಿಸಿದಂತೆ 2019 ರಲ್ಲಿ ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದಲ್ಲಿ ಸದರಿ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಯರ ಹೆಸರುಗಳು ಪ್ರತ್ಯೇಕವಾಗಿ ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ.

40. ನಾನು ಎಮ್. ಎನ್. ಕುಮಾರನ್ ರವರ ಮಗಳಲ್ಲ ಎಂದರೆ ಸುಳ್ಳು. ಎಮ್. ಎನ್. ಕುಮಾರನ್ ರವರಿಗೆ ಮಂಜೂರಾದ ಆಸ್ತಿಗಳಲ್ಲಿ ನನಗೆ

ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು. ನನ್ನ ತಂದೆಯ ಹೆಸರು ಕುಮಾರನ್ ನಾಯರ್ ಆಗಿದ್ದರೂ ಸಹ, ನನ್ನ ತಂದೆಯ ಹೆಸರು ಎಮ್. ಎನ್. ಕುಮಾರನ್ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆಂದರೆ ಸುಳ್ಳು.

41. ನಾನು ಎಮ್. ಎನ್. ಕುಮಾರನ್ ರವರ ಮಗಳು ಎಂದು ಸಾಭೀತುಪಡಿಸುವ ಕುರಿತು ನಿಪಿ-1 ನ್ನು ಸೃಷ್ಟಿಸಿದ್ದೇನೆಂದರೆ ಸುಳ್ಳು. ನಿಪಿ-1 ನನ್ನ ವಿವಾಹ ಆಮಂತ್ರಣ ಪತ್ರಿಕೆಯಲ್ಲ ಎಂದರೆ ಸುಳ್ಳು. ನಿಪಿ-1 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸುಳ್ಳು.

42. ಉದ್ದೇಶಪೂರ್ವಕವಾಗಿ ನನ್ನ ಜನನ ಪ್ರಮಾಣ ಪತ್ರ ಮತ್ತು ನನ್ನ ತಂದೆ ತಾಯಿಯ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಅವುಗಳು ನನ್ನಲ್ಲಿ ಇಲ್ಲ. ಸದರಿ ದಾಖಲೆಗಳು ನನ್ನಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು.

43. ವಾದ ಪತ್ರದಲ್ಲಿ ನಮೂದಿಸಿರುವ ವಂಶವೃಕ್ಷ ಸುಳ್ಳಿನಿಂದ ಕೂಡಿದೆ ಎಂದರೆ ಸುಳ್ಳು. ಎಮ್. ಎನ್. ಕುಮಾರನ್ ರವರು ಮರಣ ಹೊಂದಿದ ನಂತರ ಸಂಬಂದಪಟ್ಟ ಕಂದಾಯ ಅಧಿಕಾರಿಗಳು ಸೂಕ್ತ ವಂಶವೃಕ್ಷದ ಪ್ರಕಾರ ಪ್ರತಿವಾದಿಯರ ಹೆಸರುಗಳನ್ನು ಸಂಬಂಧಿಸಿದ ಕಂದಾಯ ದಾಖಲೆಗಳಲ್ಲಿ ನಮೂದಿಸಿದ್ದಾರೆ ಎಂದರೆ ಗೊತ್ತಿಲ್ಲ.



44. ದಾವಾ ಆಸ್ತಿಗಳಲ್ಲಿ ಇರುವ ಎರಡು ಮನೆಗಳು ಯಾರವು ಎಂದರೆ ಒಂದು ತಂದೆಯದು ಹಾಗೂ ಮತ್ತೊಂದು 1 ನೇ ಪ್ರತಿವಾದಿಯದು. ಸದರಿ ಮನೆಗಳ ಮನೆ ಸಂಖ್ಯೆ ಗೊತ್ತಿದೆಯೇ ಎಂದರೆ ತಿಳಿದುಕೊಂಡಿಲ್ಲ. ಸದರಿ ಮನೆಗಳನ್ನು ನಿರ್ಮಾಣ ಮಾಡಿ ಎಷ್ಟು ವರ್ಷಗಳಾಗಿವೆ ಎಂದರೆ ಗೊತ್ತಿಲ್ಲ.

45. ದಾವಾ ಸರ್ವೆ ನಂಬರ್ ಆಸ್ತಿಗಳಲ್ಲಿ ಯಾವುದೇ ಮನೆಗಳು ಇಲ್ಲ ಎಂದರೆ ಸುಳ್ಳು.

46. ಪ್ರತಿವಾದಿಯರು ಪುದುವೆಟ್ಟು ಗ್ರಾಮದ ಸರ್ವೆ ನಂಬರ್ 32 ರ ಆಸ್ತಿಯಲ್ಲಿ ಹೊಸದಾಗಿ ಮನೆಗಳನ್ನು ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸವಿದ್ದಾರೆ

ಎಂದರೆ ನಿಜ.

47. ಎಮ್.ಎನ್ ಕುಮಾರನ್ ರವರಿಗೆ ಸೇರಿದ ಆಸ್ತಿಯಲ್ಲಿ ಯಾವುದೇ ಮನೆಗಳಿಲ್ಲ ಎಂದರೆ ಮೊದಲು ಇದ್ದವು, ಆದರೆ ಈಗ ಇಲ್ಲ. ಎಲ್ಲಿಯವರೆಗೆ ಸದರಿ ಮನೆಗಳು ಇದ್ದವು ಎಂದರೆ 2017 ನೇ ಇಸವಿಯವರೆಗೆ ಇದ್ದವು. ಪ್ರಸ್ತುತ ದಾವಾ ಸಲ್ಲಿಸುವ ವೇಳೆ ಸದರಿ ಮನೆಗಳು ಇರಲಿಲ್ಲ ಎಂದರೆ ನಿಜ. ಸುಳ್ಳು ಪ್ರಕರಣವನ್ನು ಸಲ್ಲಿಸಿ, ಸುಳ್ಳು ಸಾಧನೆ ಮಾಡುತ್ತಿದ್ದೇನೆಂದರೆ ಸುಳ್ಳು.

48. ಎಮ್.ಎನ್. ಕುಮಾರನ್ ರವರಿಗೆ ಪ್ರತಿವಾದಿಯರು ಮಾತ್ರ ಮಕ್ಕಳು ಎಂದರೆ ಸುಳ್ಳು, ಆದರೆ ನಾನು ಸೇರಿದಂತೆ ಒಟ್ಟು ಮೂರು ಜನ ಮಕ್ಕಳು.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ